ವಗಲ್ಗಾಂವ್, ಕೊರೂರು ಮತ್ತು ಗೊರೆಚಿಂಚೋಳಿ, ಮೆಹಕಾರ ಮತ್ತು ವಾಜುಗಾಳ, ಹುಳಸಿಗಾಂವ್ ಮತ್ತು ಅಲವಾಹಿ, ಬರ್ದಾಪುರ ಮತ್ತು ಕಾಸಿಮಪುರ ಗ್ರಾಮೆಗಳ ಪ್ರಮುಖ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈಗಾಗಲೇ ಮೂರು ಕಾಮಗಾರಿಗಳು ಮುಗಿದಿವೆ. ಇದರಲ್ಲಿ ಕೊನೆಯದಾಗಿ ಹುಳಸಿಗಾಂವ್ ಮತ್ತು ಬರ್ದಾಪುರ ಗ್ರಾಮಗಳ ರಸ್ತೆಗಳ ಗುತ್ತಿದೆ ಪ್ರಗತಿಯಲ್ಲಿವೆ. ಈ ಎಲ್ಲಾ ಯೋಜನೆಗಳ ಮೂಲಕ ಆ ಭಾಗದ ರಸ್ತೆಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

(39) **ಶ್ರೀ ಕುಮಾರಸ್ವಾಮಿ ಹೆಚ್.ಕೆ.(ಸಕಲೇಶಪುರ)**:– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭಾರಿ ಮಳೆಯಿಂದಾಗಿ ಮಲೆನಾಡು ತಾಲ್ಲೂಕುಗಳಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಸಕಲೇಶಪುರ ಕ್ಷೇತ್ರ ಮಲೆನಾಡು ಪ್ರದೇಶವಾಗಿದ್ದು, ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನದಲ್ಲಿದೆಯೇ?

(ಇ) ಪ್ರತಿ ವರ್ಷ ಭಾರಿ ಮಳೆ ಬೀಳುವುದು ನಿಯಮಿತವಾಗಿರುವುದರಿಂದ ಸರ್ಕಾರದ ವಿಶೇಷ ಅನುದಾನವನ್ನು ನಿಗದಿ ಮಾಡಿ ಬಿಡುಗಡೆ ಮಾಡಲಾಗುವುದೇ?

ಶ್ರೀಮತಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)–

(ಅ) ಬಂದಿದೆ.

(ಆ) ಹೌದು

(ಇ) ಕಳೆದ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಗ್ರಾಮೀಣ ರಸ್ತೆಗಳ ದುರಸ್ಥಿ ಅವಶ್ಯಕತೆ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಹಾಗೂ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನ 12ನೇ ಹಣಕಾಸು ಆಯೋಗದ ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ಈ ರಸ್ತೆಗಳ ನಿರ್ವಹಣೆ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಮತ್ತೆ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಮತ್ತು ಅನುದಾನದ

ಅಗತ್ಯತೆ ಇರತಕ್ಕಂಥದ್ದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆ ಪರಿಣಾಮವಾಗಿ ನನ್ನ ಕ್ಷೇತ್ರ 157 ಕಿ.ಮೀ ಉದ್ದ ಮತ್ತು ಸುಮಾರು 100 ಕಿ.ಮೀ.ಗಿಂತ ಹೆಚ್ಚು ಅಗಲ ಬರುತ್ತದೆ. ಹಾಗೆಯೇ ನನ್ನ ವಿಧಾನ ಸಭಾ ಕ್ಷೇತ್ರಕ್ಕೆ ಮೂರು ತಾಲ್ಲೂಕುಗಳು ಸೇರುತ್ತವೆ. ಒಂದು ಸಾವಿರ ಕಿ.ಮೀ.ಗಿಂಥ ಹೆಚ್ಚು ಜಿಲ್ಲಾ ಪರಿಷತ್ ರಸ್ತೆಗಳು ಬರುತ್ತವೆ. 12ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಮತ್ತು ಮುಖ್ಯ ಮಂತ್ರಿಗಳ ಸಡಕ್ ಯೋಜನೆಯಡಿಯಲ್ಲಿ ರಸ್ತೆಗಳ ರಿಪೇರಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದರಲ್ಲಿ ನಮಗೆ ಬೇಕಾಗಿರುವಂಥ ಅನುದಾನದಲ್ಲಿ ಅಗತ್ಯತೆ ಇರತಕ್ಕಂಥ ಕೆಲಸಗಳ ಬಗ್ಗೆ ನಾವು ಲೆಕ್ಕ ಹಾಕಿದರೆ ಕನಿಷ್ಠ 500 ಕಿ.ಮೀ. ಗಿಂತ ಹೆಚ್ಚು ರಸ್ತೆಗಳನ್ನು ನಾವು ದುರಸ್ಥಿ ಮಾಡಬೇಕಾಗಿದೆ. ಆದ್ದರಿಂದ, ಮಲೆನಾಡು ತಾಲ್ಲೂಕುಗಳಾದ ಸಕಲೇಶಪುರ, ಶೃಂಗೇರಿ, ಶಿವಮೊಗ್ಗ ಜಿಲ್ಲೆ, ಕಾರವಾರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಬೇಕು. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಶಾಸಕರ ಅನುದಾನವನ್ನೂ ಸಹ ಪ್ರಕಟಿಸಿಲ್ಲ. ಮತ್ತೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಇಟ್ಟಿದ್ದೇವೆಂದೂ ಸಹ ಹೇಳುತ್ತಿಲ್ಲ. ನಿರ್ದಿಷ್ಟವಾಗಿ ರಸ್ತೆಗಳಿಗೆ ಇಟ್ಟಿರತಕ್ಕಂಥ ಹಣ ಇವತ್ತಿನ ಸಮಸ್ಯೆಗೆ ಏನೇನೂ ಕೂಡ ಸಾಲದು. ಆದ್ದರಿಂದ, ಮಲೆನಾಡು ಪ್ರದೇಶಗಳಿಗೆ ವಿಶೇಷವಾಗಿ ಮಾನ್ಯ ಮಂತ್ರಿಗಳು ಅನುದಾನವನ್ನು ಕೊಡುತ್ತಾರೆಯೇ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕು. ಈ ಒಂದು ಸಮಸ್ಯೆಗಳಿಗೆ ಮತ್ತು ಭೌಗೋಳಿಕ ವಿಸ್ತೀರ್ಣಕ್ಕೆ ಅನುಗುಣವಾಗಿ ಮಲೆನಾಡು ತಾಲ್ಲೂಕುಗಳಿಗೆ ಅದರಲ್ಲಿಯೂ ನನ್ನ ಮತಕ್ಷೇತ್ರಕ್ಕೆ ಸರ್ಕಾರ ವಿಶೇಷವಾದಂಥ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 546 ಕಿ.ಮೀ. ರಸ್ತೆ ಬರುತ್ತಿದೆ. ಇದರಲ್ಲಿ ಡಾಂಬರೀಕರಣಗೊಂಡಂಥ ರಸ್ತೆ ಕೇವಲ 164 ಕಿ.ಮೀ. ಮತ್ತೆ ಜೆಲ್ಲಿ ರಸ್ತೆ ಸುಮಾರು 214 ಕಿ.ಮೀ ಮತ್ತು ಮಣ್ಣಿನ ರಸ್ತೆ 168 ಕಿ.ಮೀ. ಸಕಲೇಶಪುರದಲ್ಲಿದೆ. ನಮಗೆಲ್ಲಾ ಗೊತ್ತಿರುವಂತೆ ಸಕಲೇಶಪುರ ತಾಲ್ಲೂಕಿನಲ್ಲಿ ಅತ್ಯಂತ ಹೆಚ್ಚು ಮಳೆಯಾಗತಕ್ಕಂಥ ತಾಲ್ಲೂಕು ಆಗಿದೆ. ಇಲ್ಲಿಗೆ ಬೇರೆ ಬೇರೆ ಯೋಜನೆಗಳಿಂದ ಹಣವನ್ನು ಕೊಡಲಾಗಿದೆ. 12 ನೇ ಹಣಕಾಸು ಆಯೋಗದ ಯೋಜನೆಗಳಲ್ಲಿ ಮತ್ತು 3054 ಹೆಡ್‌ನಲ್ಲಿ ಹಾಗೂ ಸಿ.ಆರ್.ಎಫ್ ಫಂಡ್‌ನಲ್ಲಿ ಈ ಭಾಗಕ್ಕೆ ಹಣವನ್ನು ಕೊಡುವುದಕ್ಕೆ

ಅವಕಾಶ ಇದೆ. ಹಾಗೆಯೇ, ನಬಾರ್ಡ್ ಯೋಜನೆಗಳಲ್ಲಿಯೂ ಕೂಡ ಈ ಭಾಗದ ರಸ್ತೆಗಳನ್ನು ತೆಗೆದುಕೊಳ್ಳಬೇಕು. ಈ ಭಾಗದಲ್ಲಿ ಹೆಚ್ಚು ಹೆಚ್ಚು ಮಳೆಯಾಗುವ ಕಾರಣದಿಂದ ರಸ್ತೆಗಳು ಹಾಳಾಗುತ್ತಿವೆ. ಈ ಕಾರಣದಿಂದ ಇಲ್ಲಿನ ರಸ್ತೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ಈ ಭಾಗದ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂಬುದು ಸರ್ಕಾರದ ಮುಂದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ ಎಷ್ಟು ಮಳೆಯಾಗುತ್ತದೆಂದು ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ಕನಿಷ್ಠ 100"ನಿಂದ 420" ನವರೆಗೆ ಅಲ್ಲಿ ಮಳೆಯಾಗುತ್ತದೆ. ಮಲೆನಾಡಿನಲ್ಲಿ ಒಂದು ಕಿ. ಮೀ ರಸ್ತೆಯನ್ನು ಮಾಡುವುದಕ್ಕೆ ಫಾರ್ಮೆಷನ್‌ನಿಂದ ಇಡಿದು ಡಾಂಬರ್ ಹಾಕುವುದಕ್ಕೆ ಕನಿಷ್ಠ 20 ರಿಂದ 25 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ತಾವು ಈಗ ಏನು ಪ್ರಕಟಣೆ ಮಾಡಿದ್ದೀರಿ ಅದರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಎಲ್ಲಾ ಕ್ಷೇತ್ರಗಳಿಗೆ ಕೊಟ್ಟಂತೆ ಇಲ್ಲಿಗೂ ಹಣ ಕೊಟ್ಟರೆ ಏನೇನು ಸಾಕಾಗುವುದಿಲ್ಲ. ನನ್ನ ಕ್ಷೇತ್ರವಾದ ಸಕಲೇಶಪುರ ತಾಲ್ಲೂಕಿಗೆ ಮತ್ತು ಮಲೆನಾಡು ಭಾಗಗಳ ಕ್ಷೇತ್ರಗಳಿಗೆ ವಿಶೇಷವಾದಂಥ ಅನುದಾನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ:– ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಪರಿಶೀಲನೆ ಎಂಬ ಪದವನ್ನು ಅವರು ಕೇಳಿ ಕೇಳಿ ಪರಿಶೀಲನೆ ಮಾಡುತ್ತೇನೆಂಬುದು ಅವರಿಗೂ ಕೂಡ ಅಭ್ಯಾಸವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಇಲ್ಲಿನ ಚರ್ಚೆ ಬಗ್ಗೆ ಅವರು ಕೇಳಿದ್ದಾರೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ:– ಮಾನ್ಯ ಸಚಿವರು ತಲೆ ತೂಗಿಸಿದರೆ ನಾವು ಏನೆಂದು ತಿಳಿದುಕೊಳ್ಳಬೇಕು. ಮಾಡುತ್ತಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂಬುದು ನಮಗೆ ಗೊತ್ತಾಗಬೇಕು.

ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಎಲ್ಲಾ ವಿದ್ಯುತ್ ಸ್ಥಾವರಗಳು

30(98) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್).– ಮಾನ್ಯ ಇಂಧನ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–